ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಡಿ ಎಸ್ ಇ ಆರ್ ಟಿ
DSERT
DEPARTMENT OF STATE EDUCATIONAL RESEARCH AND TRAINING
NO 4. 100 FT RING ROAD. BANASHANKARI 3RD STAGE BENGALURU - 085
Email: dsert.kar@nic.in Website : http://dsert.kar.nic.in
Phone : 080 26422372 26422373 26422374
Fax:26422377

ಸಂಖ್ಯೆ: ರಾವಿಸಂ1/ವಿ.ಕಾ./ವಿ.ನಾ.ಸ್ಪ./ 17 /2015-16 ದಿನಾಂಕ : 19-06-2015.

# ಸುತ್ತೋಲೆ

ವಿಷಯ:- 2015-16ನೇ ಸಾಲಿನಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆವಿಜ್ಞಾನ ನಾಟಕ ಸ್ಪರ್ಧೆ ಆಯೋಜಿಸುವ ಕುರಿತು.

ಉಲ್ಲೇಖ:- 1)ಸರ್ಕಾರದ ಆದೇಶ ಸಂಖ್ಯೆ : ಇಡಿ 132. ಯೋಯೋಕ 2015. ಬೆಂ. ದಿ:08/05/2015

2) Director VITM Ltr No VM 24(18) EDEXT/SISDF/2015 584 Dtd :03/06/2015

*******

ರಾಜ್ಯ ಶಿಕ್ಷಣ ಮತ್ತು ಸಂಶೋಧನೆ ಸಂಸ್ಥೆಯು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ಸಲುವಾಗಿ ವಿಜ್ಞಾನಕ್ಕೆ ಸಂಬಂಧಿಸಿದ ವಿವಿಧ ಕಾರ್ಯಕ್ರಮಗಳನ್ನು ಪ್ರತಿ ವರ್ಷ ಆಯೋಜಿಸಲಾಗುತ್ತಿದೆ. ಈ ಕಾರ್ಯಕ್ರಮಗಳಡಿಯಲ್ಲಿ ಇಲಾಖೆಯು ವಿಶ್ವೇಶ್ವರಯ್ಯ ಕೈಗಾರಿಕಾ ಹಾಗೂ ತಾಂತ್ರಿಕ ವಸ್ತು ಸಂಗ್ರಹಾಲಯದ ಸಹಯೋಗದೊಂದಿಗೆ ಆಯೋಜನೆಯಾಗುತ್ತಿರುವ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ವಿಜ್ಞಾನ ನಾಟಕ ಸ್ಪರ್ಧೆಯು ಶಾಲಾ ತಾಲ್ಲೂಕು ಜಿಲ್ಲೆ, ವಿಭಾಗ, ರಾಜ್ಯ ವಲಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಆಯೋಜನೆಯಾಗಲಿದೆ.

ರಾಜ್ಯದ ಎಲ್ಲಾ ಡಯಟ್‌ಗಳ ಪ್ರಾಂಶುಪಾಲರ ಉಸ್ತುವಾರಿ ಮತ್ತು ಮಾರ್ಗದರ್ಶನದಲ್ಲಿ, ನಾಟಕ ಸ್ಪರ್ಧೆಯನ್ನು ಆಯಾ ಡಯಟ್ ವ್ಯಾಪ್ತಿಯ ಶಾಲಾ , ತಾಲ್ಲೂಕು, ಜಿಲ್ಲಾ – ಹಂತದ ವರೆಗೆ ಆಯೋಜಿಸಬೇಕಿದೆ.

**ನಾಟಕದ ವಿಷಯ ಮತ್ತು ಅಂಕಗಳ ವಿವರ ಈ ಕೆಳಕಂಡಂತಿದೆ.**

| ❖ Main Theme : Science and Society: **ವಿಜ್ಞಾನ ಮತ್ತು ಸಮಾಜ** | | |
|---|---|---|
| Sub Themes: | 1 Life And works Of Scientists | 1. ವಿಜ್ಞಾನಿಗಳ ಜೀವನ ಮತ್ತು ಸಾಧನೆಗಳು |
| | 2.Light And Life | 2. ಬೆಳಕು ಮತ್ತು ಬದುಕು |
| | 3.Save our soil | 3. ರಕ್ಷಿಸಿ ನಮ್ಮ ಮಣ್ಣು |
| | 4.Innovate or Perish | 4.ಆವಿಷ್ಕಾರ ಇಲ್ಲವೇ ವಿನಾಶ |
| | 5.Science in daily Life | 5. ನಿತ್ಯ ಜೀವನದಲ್ಲಿ ವಿಜ್ಞಾನ |
| | 6. Cleanliness and Health | 6. ಸ್ವಚ್ಛತೆ ಮತ್ತು ಆರೋಗ್ಯ |

ಸ್ಪರ್ಧೆಯಲ್ಲಿ ಭಾಗವಹಿಸುವ ವಿಜ್ಞಾನ ನಾಟಕಗಳನ್ನು ಈ ಕೆಳಗಿನಂತೆ ಅಂಕಗಳನ್ನು ನೀಡಿ ನಿರ್ಣಯಿಸುವುದು. ಗರಿಷ್ಠ ಅಂಕಗಳು 100 ಆಗಿರುತ್ತದೆ.

**ನಾಟಕದಲ್ಲಿನ ವೈಜ್ಞಾನಿಕ ವಿಷಯ.** **(Scientific content in the Play)** = 30 **ಅಂಕಗಳು**

**ನಾಟಕದ ಪ್ರಸ್ತುತಿ** **(Presentation of the Play)** = 50 **ಅಂಕಗಳು**

**ನಾಟಕದ ಪರಿಣಾಮ** . **(Effectiveness of the Play)** = 20 **ಅಂಕಗಳು**

ತಾಲ್ಲೂಕು ಹಂತದ ಸ್ಪರ್ದೆಯನ್ನು ಡಯಟ್‌ನ ಬ್ಲಾಕ್ ನೋಡಲ್ ಅಧಿಕಾರಿಗಳ ನೇತೃತ್ವದಲ್ಲಿ ಆಯಾ ತಾಲ್ಲೂಕಿನ ಆಯಾ ಬ್ಲಾಕಿನ ಕ್ಷೇತ್ರಶಿಕ್ಷಣಾಧಿಕಾರಿಗಳ ಸಹಕಾರದೊಂದಿಗೆ ಆಯೋಜಿಸುವುದು.ಬ್ಲಾಕ್ ಹಂತದ ಸ್ಪರ್ಧೆಗೆ ಸಾಕಷ್ಟು ಪ್ರಚಾರ ನೀಡಿ ಹೆಚ್ಚಿನ ವಿದ್ಯಾರ್ಥಿಗಳು ಪಾಲ್ಗೊಳ್ಳುವಂತೆ ಕ್ರಮವಹಿಸುವುದು. ಬ್ಲಾಕ್ ಹಂತದ ಕಾರ್ಯಕ್ರಮಗಳ ಆಯೋಜನೆಯಲ್ಲಿ ಡಯಟ್‌ನ ಅಧಿಕಾರಿಗಳ ಭಾಗವಹಿಸುವಿಕೆ ಕಡ್ಡಾಯ.
ವಿವಿಧ ಹಂತಗಳಲ್ಲಿ ನಿಗದಿತ ಅವಧಿಯೊಳಗೆ ಆಯೋಜಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

| ಕ್ರ.ಸಂ | ಹಂತ | ಆಯೋಜಿಸಬೇಕಾದ ದಿನಾಂಕ | ಷರಾ |
|---|---|---|---|
| 1 | ಶಾಲಾ ಹಂತ | ಜುಲೈ 2015 ರೊಳಗೆ. | |
| 2 | ತಾಲ್ಲೂಕು ಹಂತ | 20, ಆಗಸ್ಟ್ 2014 ರೊಳಗೆ. | |
| 3 | ಜಿಲ್ಲೆ | 04, ಸೆಪ್ಟಂಬರ್ 2014 ರೊಳಗೆ. | ಕನಿಷ್ಠ 6 ತಂಡಗಳು ಭಾಗವಹಿಸಬೇಕು |
| 4 | ವಿಭಾಗ | ಅಕ್ಟೋಬರ್ 03, 2014 ರೊಳಗೆ. | ಪ್ರತಿ ಜಿಲ್ಲೆಯಿಂದ ಪ್ರಥಮ ಸ್ಥಾನ ಪಡೆದ ಒಂದು ತಂಡ |
| 5 | ರಾಜ್ಯ | 30 ,ಅಕ್ಟೋಬರ್ 2015 ರಂದು | ಪ್ರತಿ ವಿಭಾಗದಿಂದ ಪ್ರಥಮ ಸ್ಥಾನ ಪಡೆದ ಒಂದು ತಂಡ |
| 6 | ದಕ್ಷಿಣ ವಲಯ ಮಟ್ಟ | ನವೆಂಬರ್ 2015 ರ 1 ನೇ ವಾರ | ರಾಜ್ಯದಿಂದ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ತಂಡಗಳು. |
| 7 | ರಾಷ್ಟ್ರ ಹಂತ | ಜನವರಿ 2015 ರಲ್ಲಿ Pragati Maidan New Delhi | ದಕ್ಷಿಣ ವಲಯ ಮಟ್ಟದಲ್ಲಿ ಪ್ರಥಮ/ ದ್ವಿತೀಯ ಸ್ಥಾನ ಪಡೆದ ತಂಡ. |

**ನಾಟಕ ಸ್ಪರ್ಧೆಯ ನಿಯಮಗಳು ಕೆಳಕಂಡಂತಿವೆ.**

- ಭಾಗವಹಿಸಲಿರುವವರು : 8 ರಿಂದ 10ನೇ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿ/ನಿಯರು. ಒಂದು ತಂಡದ ಸದಸ್ಯರ ಸಂಖ್ಯೆ: ಗರಿಷ್ಠ 08 ಜನ ವಿದ್ಯಾರ್ಥಿಗಳು ಮಾತ್ರ.
- ಶಿಕ್ಷಕರು ನಾಟಕ ಪ್ರದರ್ಶನ ವಾಗುತ್ತಿರುವ ಸಮಯದಲ್ಲಿ ನಾಟಕದ ರಂಗಸ್ಥಳದಲ್ಲಿ ಕಾಣಿಸಿಕೊಳ್ಳುವುದಾಗಲೀ , ಯಾವುದೇ ರೀತಿಯ ಸಹಕಾರಗಳನ್ನು ನೀಡುವುದಾಲೀ ಮಾಡುವಂತಿಲ್ಲ.
- ನಾಟಕದ ಅವಧಿ 30 ನಿಮಿಷಕ್ಕಿಂತ ಹೆಚ್ಚಿಗೆ ಇರಬಾರದು.
- ನಾಟಕವು ನಿಗದಿಪಡಿಸಿರುವ ಮೈನ್ ಥೀಮ್ ಮತ್ತು ಸಬ್ ಥೀಮ್ ಹೊಂದಿದಂತೆ ವೈಜ್ಞಾನಿಕ ಸಂದೇಶವನ್ನು ಹೊಂದಿರಬೇಕು.
- ಸಮಯ ನಿರ್ವಹಣೆಯ ದೃಷ್ಠಿಯಿಂದ ನಾಟಕ ತಂಡಗಳು ಒಂದು ತಂಡದ ಪ್ರದರ್ಶನ ಪೂರ್ಣಗೊಂಡ ನಂತರ ಗರಿಷ್ಠ 10 ನಿಮಿಷಗಳ ಒಳಗಾಗಿ ನಾಟಕ ಪ್ರದರ್ಶನಕ್ಕೆ ಸಿದ್ದವಾಗುವಂತಿರಬೇಕು.
- ನಾಟಕವನ್ನು ಆಸಕ್ತಿದಾಯಕವಾಗಿಸಲು ವೇಷಭೂಷಣಗಳನ್ನು, ನೃತ್ಯ, ಸಂಗೀತ, ವೈಜ್ಞಾನಿಕ ಮಾದರಿ, ವೈಜ್ಞಾನಿಕ ಉಪಕರಣಗಳು ಪೋಸ್ಟರ್, ಬ್ಯಾನರ್, ಧೃಕ್ ಶ್ರವಣ ಮಾಧ್ಯಮ, ಮೈಮ್ ಇತ್ಯಾದಿಗಳನ್ನು ಬಳಸಬಹುದು.
- ನಾಟಕದ ಪ್ರಸ್ತುತಿಯಲ್ಲಿ ಬಳಸಬಹುದಾದ ಭಾಷೆ : ಮಾನ್ಯತೆ ಪಡೆದ ಯಾವುದೇ ಭಾರತೀಯ ಭಾಷೆ
- ನಾಟಕ ಪ್ರದರ್ಶನದ ಮೊದಲು ನಾಟಕದ Script 4 ಪ್ರತಿಗಳ ನ್ನು ಸಲ್ಲಿಸುವುದು.

ತಾಲ್ಲುಕು ಮತ್ತು ಜಿಲ್ಲಾ ಮಟ್ಟದ ಸ್ಪರ್ಧೆಯನ್ನು ಡಯಟ್‌ಗಳ ಪ್ರಾಂಶುಪಾಲರು ನಡೆಸತಕ್ಕದ್ದು. ಈ ಕಾರ್ಯಕ್ರಮವನ್ನು ಸೆಪ್ಟಂಬರ್, 2015 ರ 04 ನೇ ದಿನಾಂಕದೊಳಗೆ ಆಯೋಜಿಸಿ, **ಪ್ರಥಮ ಸ್ಥಾ**ನ ಪಡೆದ ತಂಡದ ಹೆಸರನ್ನು ವಿಭಾಗ ಮಟ್ಟದ ಸ್ಪರ್ಧೆಗಾಗಿ ಅನುಬಂಧ-1 ರಲ್ಲಿರುವಂತೆ ಆಯಾ ಸಿ.ಟಿ.ಇ./ಡಯಟ್ ನ ಮುಖ್ಯಸ್ಥರಿಗೆ 10 ನೇ ಸೆಪ್ಟಂಬರ್ , 2015 ರ ಒಳಗೆ ಕಳುಹಿಸುವುದು ಹಾಗೂ ಪ್ರತಿಯನ್ನು ಈ ಕಚೇರಿಗೆ ಕಳುಹಿಸುವುದು.

**ನಾಟಕವು ಯಾಂತ್ರಿಕ ಕ್ರಿಯೆಯಾಗಿರದೆ, ಪಾತ್ರಧಾರಿಗಳು ಮತ್ತು ವೀಕ್ಷಕರಿಗೆ ಭಾವನಾತ್ಮಕ ಮತ್ತು ಸೌಂದರ್ಯಾತ್ಮಕ ಅನುಭವ ನೀಡುವಂತಿರಬೇಕು. ವೀಕ್ಷಕರನ್ನು ಸಂಪೂರ್ಣ ತೊಡಗಿಸಿಕೊಂಡು ವೈಜ್ಞಾನಿಕ ಸಂದೇಶ ನೀಡುವಂತಿರಬೇಕು.**

**ಅನುದಾನ:**

**ಬ್ಲಾಕ್ ಹಂತ** : ತಾಲ್ಲೂಕು ಮಟ್ಟದ ನಾಟಕ ಸ್ಪರ್ಧೆ ಆಯೋಜನೆಗೆ ಪ್ರತಿ ಬ್ಲಾಕಿಗೆ ಪ್ರೋತ್ಸಾಹದ ಮೊತ್ತ ತಲಾ ರೂ. 2500=00 (ರೂ.ಎರಡು ಸಾವಿರದ ಐದು ನೂರು ಮಾತ್ರ) ಗಳನ್ನು ಮಂಜೂರು ಮಾಡಿದ್ದು, ಸದರಿ ಮೊತ್ತವನ್ನು ವಿದ್ಯಾರ್ಥಿಗಳಿಗೆ ಬಹುಮಾನ, ತೀರ್ಪುಗಾರರ ಸಂಭಾವನೆಗೆ ಬಳಸಿಕೊಳ್ಳುವುದು. ಸದರಿ ಮೊತ್ತವನ್ನು ಈಗಾಗಲೇ ಆಯಾ ಡಯಟ್ ಪ್ರಾಂಶುಪಾಲರ ಡಿಡಿಒ ಕೋಡ್‌ಗೆ ಅಪ್‌ಲೋಡ್ ಮಾಡಲಾಗುವುದು.

**ಜಿಲ್ಲಾ ಹಂತ**

ಜಿಲ್ಲಾ ಮಟ್ಟದ ವಿಜ್ಞಾನ ನಾಟಕ ಸ್ಪರ್ಧೆಯ ಆಯೋಜನೆಗಾಗಿ ಪ್ರತಿ ಶೈಕ್ಷಣಿಕ ಜಿಲ್ಲೆಗೆ ತಲಾ ರೂ.15,000/- ಗಳ (ರೂ ಹದಿನೈದು ಸಾವಿರ ಮಾತ್ರ) ಅನುದಾನ ನಿಗಧಿಪಡಿಸಲಾಗಿದೆ. ಅನುದಾನವನ್ನು 2 ನೇ ತ್ರೈಮಾಸಿಕದಲ್ಲಿ ಅಪ್‌ಲೋಡ್ ಮಾಡಲಾಗುತ್ತಿದೆ. ಅನುದಾನ

**ಜಿಲ್ಲಾ ಹಂತದ ನಾಟಕ ಸ್ಪರ್ಧೆಗೆ ಮೊತ್ತದಲ್ಲಿ ಈ ಕೆಳಕಂಡಂತೆ ವೆಚ್ಚ ಭರಿಸುವುದು.**

| ಕ್ರ.ಸ | ವಿವರ | ಮೊತ್ತ |
|---|---|---|
| 1 | ಬಹುಮಾನ | |
| | ಪ್ರಥಮ | ರೂ. 2000-00 |
| | ದ್ವಿತೀಯ | ರೂ. 1, 600-00 |
| | ತೃತೀಯ | ರೂ. 1, 200-00 |
| | ಉತ್ತಮ ನಿರ್ದೇಶಕ, ಉತ್ತಮ ನಾಟಕ ರಚನಕಾರರು, ಉತ್ತಮ ನಟ, ಉತ್ತಮ ನಟಿ, ತಲಾ ಒಂದರಂತೆ ರೂ. 250/- ರಂತೆ | ರೂ. 1000-00 |
| | **ಬಹುಮಾನದ ಒಟ್ಟು ಮೊತ್ತ** | **ರೂ. 5800-00** |
| 2 | ತೀರ್ಪುಗಾರರ ಸಂಭಾವನೆ (3 X 300) | ರೂ. 900-00 |
| 3 | ವಿದ್ಯಾರ್ಥಿಗಳು ಮತ್ತು ತಂಡವನ್ನು ಕರೆತರುವ ತಂಡದ ಒಬ್ಬ ಶಿಕ್ಷಕರಿಗೆ ವಾಸ್ತವ ಪ್ರಯಾಣ ಭತ್ಯೆ (To & fro) ಡಿ.ಎ. ನೀಡುವಂತಿಲ್ಲ. ಸಾದಿಲ್ವಾರು ಹಾಗೂ ಆಯೋಜನಾ ವೆಚ್ಚ, ಲಘು ಉಪಹಾರ ಮತ್ತು ಕಾಫಿ/ಟೀ ಸ್ಪರ್ಧಿಗಳು, ಮಾರ್ಗದರ್ಶಿ ಶಿಕ್ಷಕರು, ಆಯೋಜಕರು, ತೀರ್ಪುಗಾರರಿಗೆ | ರೂ. 8,300=00 |
| | **ಒಟ್ಟು** | **ರೂ.15,000-00** |

**ತೀರ್ಪುಗಾರರು:** ನಾಟಕ ಸ್ಪರ್ಧೆಗೆ ನಿಮ್ಮ ಜಿಲ್ಲೆಯಲ್ಲಿ ಪ್ರೌಢಶಾಲೆಗಳಲ್ಲಿರುವ ನಾಟಕ ಶಿಕ್ಷಕರು ತೀರ್ಪುಗಾರಾಗಿರಲಿ. ಒಂದು ವೇಳೆ ನಾಟಕ ಶಿಕ್ಷಕರು ಲಭ್ಯವಿಲ್ಲದಿದ್ದಲ್ಲಿ ನಾಟಕ ರಂಗದ ಬಗ್ಗೆ ಮಾಹಿತಿಯುಳ್ಳ ಹಾಗೂ ವಿಜ್ಞಾನ ನಾಟಕಗಳನ್ನು ಸೂಕ್ತವಾಗಿ ವಿಶ್ಲೇಷಿಸಬಲ್ಲ ಸಂನ್ಮೂಲ ತೀರ್ಪುಗಾರಾಗಿರಲಿ. ಡಯಟ್ ಉಪನ್ಯಾಸಕರು ತೀರ್ಪುಗಾರರಾಗಿದ್ದಲ್ಲಿ ಅವರಿಗೆ ಯಾವುದೇ ಸಂಭಾವನೆ ನೀಡುವಂತಿಲ್ಲ.

**ವಿಶೇಷ ಸೂಚನೆ:-**

- ಸ್ಪರ್ಧೆಯನ್ನು ಆಯೋಜಿಸುತ್ತಿರುವ ಕುರಿತು ಎಲ್ಲಾ ಶಾಲೆಗಳಿಗೆ ಸುತ್ತೋಲೆ ಕಳುಹಿಸಿ ಹೆಚ್ಚಿನ ಸಂಖ್ಯೆಯಲ್ಲಿ ತಂಡಗಳು ಭಾಗವಹಿಸುವಂತೆ ಕ್ರಮ ವಹಿಸುವುದು. ಈ ಕುರಿತು ಸಾಕಷ್ಟು ಪ್ರಚಾರ ನೀಡಿ, ಕಛೇರಿಯ ನಾಮಫಲಕಗಳಲ್ಲಿ ಪ್ರಕಟಿಸುವುದು.
- ಸ್ಪರ್ಧೆ ಆಯೋಜನೆ ಕುರಿತ ಪೋಟೋ ಸಹಿತ ವರದಿ ತಪ್ಪದೇ ಸಲ್ಲಿಸುವುದು.
- ನಮೂನೆ 1 ರಲ್ಲಿರುವಂತೆ ವಿವರಗಳನ್ನು ಈ ಕಛೇರಿಗೆ ಮತ್ತು ವಿಭಾಗ ಮಟ್ಟದ ಸ್ಪರ್ಧೆ ಆಯೋಜಿಸಲಿರುವ ನಿಮ್ಮ ವ್ಯಾಪ್ತಿಯ ಸಿಟಿಇ/ಸಂಸ್ಥೆಯ ಮುಖ್ಯಸ್ಥರಿಗೆ ಮಾಹಿತಿ ನೀಡುವುದು.

ಸಹಿ/-

**ನಿರ್ದೇಶಕರು,**
**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ**
**ಬೆಂಗಳೂರು 560 085**

**ಗೆ,**

ರಾಜ್ಯದ ಎಲ್ಲಾ ಡಯಟ್‌ಗಳ ಪ್ರಾಂಶುಪಾಲರಿಗೆ ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು** : 34 ಶೈಕ್ಷಣಿಕ ಜಿಲ್ಲೆಗಳ ಉಪನಿರ್ದೇಶಕರಿಗೆ (ಆ), ಸಾ.ಶಿ.ಇ ಇವರಿಗೆ ನೀಡುತ್ತಾ ಸಂಬಂಧಿಸಿದ ಡಯಟ್‌ಗೆ ಅಗತ್ಯ ಸಹಕಾರ ನೀಡಲು ತಿಳಿಸಿದೆ.

2) ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ

ಅನುಬಂಧ-1

| ವಿಭಾಗ ಮಟ್ಟದ ವಿಜ್ಞಾನ ನಾಟಕ ಸ್ಪರ್ಧೆಯ ಆಯೋಜಕರು ಮತ್ತು ಭಾಗವಹಿಸುವ ಜಿಲ್ಲೆಗಳ ವಿವರ | | |
|---|---|---|
| ಕ್ರಮ ಸಂ | ಆಯೋಜಕರು | ಭಾಗವಹಿಸುವ ಜಿಲ್ಲೆಗಳು |
| 1 | ಪ್ರಾಂಶುಪಾಲರು ಸಿ.ಟಿ.ಇ. ಗುಲ್ಬರ್ಗ | 1.ಬೀದರ್, 2) ಗುಲ್ಬರ್ಗ, 3)ಯಾದಗಿರಿ, 4) ಬಾಗಲಕೋಟೆ , 5)ರಾಯಚೂರು, 6)ಬಿಜಾಪುರ. |
| 2 | ಪ್ರಾಂಶುಪಾಲರು ಡಯಟ್ ಧಾರವಾಡ | 1)ಚಿಕ್ಕೋಡಿ, 2)ಕಾರವಾರ, 3)ಧಾರವಾಡ 4)ಗದಗ 5) ಶಿರಸಿ, 6) ಬೆಳಗಾವಿ. |
| 3 | ಪ್ರಾಂಶುಪಾಲರು ಸಿ.ಟಿ.ಇ. ಚಿತ್ರದುರ್ಗ | 1)ಚಿತ್ರದುರ್ಗ, 2) ಹಾವೇರಿ, 3) ದಾವಣಗೆರೆ 4)ಮಧುಗಿರಿ , 5) ಬಳ್ಳಾರಿ 6)ಕೊಪ್ಪಳ. |
| 4 | ಪ್ರಾಂಶುಪಾಲರು ,ಡಯಟ್ ಬೆಂಗಳೂರು ಗ್ರಾಮಾಂತರ | 1)ಬೆಂಗಳೂರು ಉತ್ತರ , 2) ಬೆಂಗಳೂರು ದಕ್ಷಿಣ, 3) ಕೋಲಾರ 4) ಬೆಂಗಳೂರು ಗ್ರಾಮಾಂತರ , 5)ಚಿಕ್ಕಬಳ್ಳಾಪುರ ,6) ತುಮಕೂರು. |
| 5 | ಪ್ರಾಂಶುಪಾಲರು ಡಯಟ್ ಶಿವಮೊಗ್ಗ | 1)ಚಿಕ್ಕಮಗಳೂರು, 2) ಉಡುಪಿ, 3)ದಕ್ಷಿಣ ಕನ್ನಡ ಜಿಲ್ಲೆ, 4)ಶಿವಮೊಗ್ಗ , 5) ಹಾಸನ. |
| 6 | ಪ್ರಾಂಶುಪಾಲರು ಸಿ.ಟಿ.ಇ.ಮೈಸೂರು | 1)ಮೈಸೂರು, 2) ಕೊಡಗು, 3)ಚಾಮರಾಜನಗರ, 4)ಮಂಡ್ಯ , 5) ರಾಮನಗರ. |

**ನಮೂನೆ-1 ಜಿಲ್ಲಾ ಹಂತದಲ್ಲಿ ವಿಜೇತರಾದವರ ವಿವರಗಳು:**

| **ಶೈಕ್ಷಣಿಕ ಜಿಲ್ಲೆಯ ಹೆಸರು** | **ಶಾಲೆಯ ಹೆಸರು** | **ವಿಜ್ಞಾನ ನಾಟಕದ ಸಬ್‌ಥೀಮ್** | **ತಂಡದ ಸದಸ್ಯರ ಹೆಸರುಗಳು** | **ಮಾರ್ಗದರ್ಶಿ ಶಿಕ್ಷಕರ ಹೆಸರು ಮತ್ತು ಮುಖ್ಯ ಶಿಕ್ಷಕರು & ಮಾರ್ಗದರ್ಶಿ ಶಿಕ್ಷಕರ ಮೊಬೈಲ್ ಸಂಖ್ಯೆ** | **ನಾಟಕ ಸ್ಪರ್ಧೆ ಆಯೋಜಿಸಿದ ದಿನಾಂಕ** |
|---|---|---|---|---|---|
| | | | | | |
| | | | | | |
| | | | | | |
| | | | | | |

**ನಮೂನೆ-2 ಜಿಲ್ಲಾ ಹಂತದಲ್ಲಿ ಭಾಗವಹಿಸಿದವರ ವಿವರ**

| ಜಿಲ್ಲೆಯ ಹೆಸರು | ಕಾರ್ಯಕ್ರಮ ಆಯೋಜಿಸಿದ ಸ್ಥಳ ಮತ್ತು ದಿನಾಂಕ | ಭಾಗವಹಿಸಿದವರ ಸಂಖ್ಯೆ | | | ಷರಾ |
|---|---|---|---|---|---|
| | | ಗಂ | ಹೆ | ಒಟ್ಟು | |
| | | | | | |

**ನಮೂನೆ-3  ಬ್ಲಾಕ್ ಹಂತದಲ್ಲಿ ಭಾಗವಹಿಸಿದವರ ಸಂಖ್ಯಾ ವಿವರ**

**ಜಿಲ್ಲೆಯ ಹೆಸರು:**

| ಬ್ಲಾಕ್ ಹೆಸರು | ಕಾರ್ಯಕ್ರಮ ಆಯೋಜಿಸಿದ ಸ್ಥಳ ಮತ್ತು ದಿನಾಂಕ | ಭಾಗವಹಿಸಿದವರ ಸಂಖ್ಯೆ | | | ಷರಾ |
|---|---|---|---|---|---|
| | | ಗಂಡು | ಹೆಣ್ಣು | ಒಟ್ಟು | |
| | | | | | |
| | | | | | |
| | | | | | |
| | | | | | |
| | | | | | |

**ನಮೂನೆ-4  ಜಿಲ್ಲಾ ಹಂತದ ತೀರ್ಪುಗಾರರ ವಿವರ**

| **ಜಿಲ್ಲೆಯ ಹೆಸರು** | **ತೀರ್ಪುಗಾರರ ವಿವರ** | |
|---|---|---|
| | **ಹೆಸರು ಮತ್ತು ಹುದ್ದೆ** | **ದೂರವಾಣಿ ಸಂಖ್ಯೆ** |
| | | |
| | | |
| | | |

**ನಮೂನೆ-5  ತೀರ್ಪುಗಾರರ ವಿವರ**

| ಜಿಲ್ಲೆಯ ಹೆಸರು | ಜಿಲ್ಲಾ ಹಂತದವಿಜ್ಞಾನ ನಾಟಕ ಸ್ಪರ್ಧೆಯ ತೀರ್ಪುಗಾರರ ಹೆಸರು | ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆ ಮತ್ತು ಹುದ್ದೆ ಸಂಪರ್ಕ ಸಂಖ್ಯೆ | ತೀರ್ಪುಗಾರರ ಸಹಿ |
|---|---|---|---|
| | 1. | | |
| | 2. | | |
| | 3. | | |